**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ,**
**ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 41/2022**
**ಸಿ.ಡಬ್ಲ್ಯೂ–2**
**ಪಿ.ಡಬ್ಲೂ –2**

| | | |
|---|---|---|
| ಸಾಕ್ಷಿದಾರರ ಹೆಸರು | : | ತಿಮ್ಮಪ್ಪ ಗೌಡ |
| ತಂದೆಯ ಹೆಸರು | : | ರುಕ್ಮಯ್ಯ ಗೌಡ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಎಣ್ಮೂರು |
| ದಿನಾಂಕ | : | 16-07-2026. |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾ.ಸಾ.1 ನನ್ನ ಹೆಂಡತಿ. ಚಾ.ಸಾ.3 ನನ್ನ ಪರಿಚಯಸ್ಥರು . ಆರೋಪಿ ನನಗೆ ಪರಿಚಯ ಇರುತ್ತಾರೆ.

ನಾನು ನಿಂತಿಕಲ್ಲು ಎಂಬಲ್ಲಿ ಕಾಮಧೇನು ಟ್ರೇಡರ್ಸ್ ಎಂಬ ದಿನಸಿ ಅಂಗಡಿಯನ್ನು ನಡೆಸುತ್ತಿದ್ದೇನೆ. ದಿನಾಂಕ 14-09-2021 ರ ಸಮಯದಲ್ಲಿ ನನಗೆ ಒಂದೂವರೆ ತಿಂಗಳ ಹಿಂದೆ ನಡೆದ ಅಪಘಾತದಿಂದ ಸೊಂಟದಲ್ಲಿ ನೋವು ಇದ್ದು, ಭಾರವನ್ನು ಎತ್ತಲು ಆಗುತ್ತಿರಲಿಲ್ಲ. ಸದರಿ ದಿನದಂದು ಮನೆಗೆ ಒಂದು ಗ್ಯಾಸ್ ಸಿಲಿಂಡರ್ ಬಂದಿರುತ್ತದೆ. ಸದರಿ ಸಿಲಿಂಡರನ್ನು ನನ್ನ ಅಂಗಡಿಯ ಮುಂಭಾಗದಲ್ಲಿಟ್ಟಿರುತ್ತಾರೆ.

ನಂತರ ರಾತ್ರಿ ಸುಮಾರು 8.45 ಗಂಟೆಗೆ ಸದರಿ ನನ್ನ ಅಂಗಡಿಯನ್ನು ಮುಚ್ಚುವ ಸಮಯದಲ್ಲಿ ಚಾ.ಸಾ.1 ರವರು ನನ್ನ ಜೊತೆಗಿದ್ದು, ಆ ಸಮಯಕ್ಕೆ ಆರೋಪಿಯು ನನ್ನ ಅಂಗಡಿಯ ಬಳಿ ಸಾಮಾಗ್ರಿಗಳನ್ನು ಖರೀದಿಸಲು ಬಂದಿರುತ್ತಾರೆ. ನನಗೆ ಭಾರವನ್ನು ಎತ್ತಲು ಆಗದಿದ್ದ ಕಾರಣ ಆರೋಪಿಯ ಬಳಿ ಸಿಲಿಂಡರನ್ನು

ಗೋಡಾನ್‌ಗೆ ಇಡಬಹುದಾ ಎಂದು ಕೇಳಿರುತ್ತೇನೆ. ಆಗ ಆರೋಪಿಯು ಆಗುತ್ತದೆ ಎಂದು ತಿಳಿಸಿ, ಸಿಲಿಂಡರನ್ನು ತೆಗೆದುಕೊಂಡು ಗೋಡಾನ್‌ನ ಬಳಿ ಹೋಗಿರುತ್ತಾರೆ. ಆರೋಪಿಯ ಜೊತೆ ಚಾ.ಸಾ.1 ರವರು ಹೋಗಿರುತ್ತಾರೆ. ಗೋಡಾನ್‌ನಿಂದ ನನಗೆ ಜೋರಾದ ಬೊಬ್ಬೆಯ ಸದ್ದು ಕೇಳಿ ಬಂದಿದ್ದು, ಆಗ ನಾನು ನನ್ನ ಅಂಗಡಿಯಲ್ಲಿ ಚಾ.ಸಾ.3 ರವರಿಗೆ ಸಾಮಾಗ್ರಿಗಳನ್ನು ಕಟ್ಟುತ್ತಿದ್ದೆ. ಬೊಬ್ಬೆ ಕೇಳಿದ ನಂತರ ನಾನು ಹಾಗೂ ಚಾ.ಸಾ.3 ರವರು ಗೋಡಾನ್‌ಗೆ ಹೋದಾಗ ಚಾ.ಸಾ.1 ರವರು ಅಳುತ್ತಿದ್ದರು. ನಾವು ಅಲ್ಲಿಗೆ ಹೋಗುವ ಸಮಯಕ್ಕೆ ಆರೋಪಿಯು ಗೋಡಾನ್‌ನಿಂದ ಓಡಿ ಹೋಗಿರುತ್ತಾರೆ.

ನಂತರ ನಾವು ಚಾ.ಸಾ.1 ರವರ ಬಳಿ ಏನಾಯಿತು ಎಂದು ವಿಚಾರಿಸಿದಾಗ, ಆರೋಪಿಯು ಚಾ.ಸಾ.1 ರವರ ಕೈಯನ್ನು ಹಿಡಿದೆಳೆದು, ಎದೆಯ ಭಾಗವನ್ನು ಮುಟ್ಟಿ ಚಾ.ಸಾ.1 ರವರನ್ನು ತಬ್ಬಿಕೊಂಡು ಮಾನಭಂಗ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಘಟನೆಯನ್ನು ಬೇರೆಯವರಿಗೆ ಹೇಳಿದರೆ ಜೀವಂತ ಇಡುವುದಿಲ್ಲವೆಂದು ಆರೋಪಿಯು ಚಾ.ಸಾ.1 ರವರಿಗೆ ಬೆದರಿಕೆ ಒಡ್ಡಿರುತ್ತಾರೆಂದು ಚಾ.ಸಾ.1 ರವರು ನಮ್ಮಲ್ಲಿ ತಿಳಿಸಿರುತ್ತಾರೆ.

ಆ ಸಮಯದಲ್ಲಿ ಮಳೆ ಬರುತ್ತಿದ್ದ ಕಾರಣ ಪೊಲೀಸರಿಗೆ ಕರೆ ಮಾಡಿದರೂ, ಕರೆ ಸಿಗುತ್ತಿರಲಿಲ್ಲ. ನಂತರ ಘಟನೆ ನಡೆದ ಮರುದಿವಸ ಬೆಳ್ಳಾರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ. ಈ ಘಟನೆಯ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರು ಯಾವುದೇ ತಗಾದೆಯನ್ನು ಎತ್ತಿರುವುದಿಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಪಿ. ವಕೀಲರಿಂದಃ**

**ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ್ದು ಅದರಂತೆ ಕಾಲಾವಕಾಶ ನೀಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ